

ಎಂದು ರಾಘವನಿಗೆ ಗೊತ್ತು. ನಮ್ಮ ನಮ್ಮ ವೈಯಕ್ತಿಕ ಇಷ್ಟಾನಿಷ್ಟಗಳು ಏನೇ ಇರಲಿ, ಕೊನೇಪಕ್ಷ ನೋಡುವವರ ಕಣ್ಣಿಗೆ ಗಿಲೀಟು ಮಾಡುವುದಕ್ಕಾದರೂ ಅಷ್ಟಿಷ್ಟು ಸಂಪ್ರದಾಯಗಳನ್ನು ಪಾಲಿಸುವ ನಟನೆ ಮಾಡಬೇಕು ಎಂದು ರಾಘವ ಹೇಳಿದ್ದು ಮನೋರಮೆಗೆ ಪಥ್ಯವಾಗಿರಲಿಲ್ಲ.

'ನೋಡು, ನನ್ನ ಆತ್ಮಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳೋಳು ನಾನು. ಯಾರು ಏನಂದ್ಕೋತಾರೆ ಅನ್ನೋದು ನಂಗೆ ಬೇಕಾಗಿಲ್ಲ. ನಿನಗೆ ಹೇಗಿರ್ಬೇಕು ಅನ್ನಿಸುತ್ತೋ ಹಾಗೆ ನೀನಿರು. ನನಗೆ ಅನ್ನಿಸಿದ ಹಾಗೆ ನಾನಿರ್ತೀನಿ' ಕಡ್ಡಿ ಮುರಿದ ಹಾಗೆ ಮಾತಾಡುವುದು ಅವಳ ಸ್ವಭಾವ. ಹಾಗಂತ ಕೆಟ್ಟವಳೇನಲ್ಲ. ಸ್ವಭಾವತಃ ಒಳ್ಳೆಯವಳೇ. ತಂಗಿಯ ಮದುವೆಗೆ, ತಮ್ಮನ ಓದಿಗೆ ಗಂಡ ದುಡ್ಡು ಕೊಟ್ಟರೆ ಚಕಾರ ಎತ್ತಿದವಳಲ್ಲ ಮನೋರಮಾ. ರಾಘವನ ಅಮ್ಮನಿಗೆ ತಿಂದನ್ನ ಅರಗದೆ, ಕುಡಿದ ನೀರು ದಕ್ಕದೆ, ಹೊಟ್ಟೆಹುಣ್ಣಿಗೆ ಆಪರೇಷನ್ ಅನಿವಾರ್ಯ ಎಂದಾದಾಗ ಅವರನ್ನು ಮನೆಯಲ್ಲಿಟ್ಟುಕೊಂಡು, ಅವರ ಆರೈಕೆಯಲ್ಲಿ ಯಾವ ಕೊರೆಯೂ ಆಗದಂತೆ ನೋಡಿಕೊಂಡು, ರಾಘವನ ಮನಸ್ಸನ್ನು ಮೃದುಗೊಳಿಸಿದವಳು. ಅವನು ಮಾತ್ರವೇ, ಅವನ ಅಮ್ಮ ಕೂಡ ಸೊಸೆಯ ಬಗ್ಗೆ ಮೃದುಭಾವನೆ ತಾಳಿದ್ದರು.

'ಅದೊಂಥರಾ ವಕ್ರ. ತಾನು ಹೇಳಿದ್ದೇ ಸರಿ ಅನ್ನೋ ಜಾತಿ. ಮನಸ್ಸು ಮಾತ್ರಾ ಒಳ್ಳೇದು. ಅವಳ ಇಚ್ಛೆ ಬಂದ ಹಾಗಿರ್ಲಿ. ನೀವು ಏನೂ ಅನ್ನೋಕೆ ಹೋಗ್ಬೇಡಿ...' ಎಂದು ರಾಘವನ ಅಪ್ಪನಿಗೆ ಬೋಧನೆಯಾಗಿತ್ತಂತೆ. ಆದರೆ ಅಪ್ಪ ಮತ್ತೊಂದು ನಮೂನಿ. 'ಕೇಳ್ತಾರೋ, ಬಿಡ್ತಾರೋ ಅವರ ಹಣೇಬರ. ಊದೋ ಶಂಖ ಊದಿ ಬಿಡೋದು. ನಮ್ಮ ಜವಾಬ್ದಾರಿ ಪೂರೈಸೋದು' ಅನ್ನುವಂತವರು ಅಪ್ಪ. ಇಂತಾ ಹೆಂಡತಿ, ಅಂತಾ ಅಪ್ಪನ ನಡುವೆ ರಾಘವ ಇಬ್ಬಂದಿಯಾಗಿದ್ದರೂ ಹೆಂಡತಿಯ ಕಡೆ ಅವನ ಒಲವು ಹೆಚ್ಚಿಗೆ ವಾಲುತ್ತಿದ್ದುದು ಸತ್ಯ. ಅವಳು ಸಕಾರಣ ಕೊಟ್ಟು ಹೇಳುತ್ತಿದ್ದಾಗ ಅದು ಸರಿ ಅನಿಸುತ್ತಿದ್ದುದು ವಾಸ್ತವ. ಸದಾ ಜೊತೆಗಿರುತ್ತಿದ್ದವಳು ಅವಳೇ ತಾನೇ? ಪ್ರಭಾವ ಆಗಿಯೇ ಆಗುತ್ತದೆ. ನಾಲ್ಕು ದಿನಗಳ ಮಟ್ಟಿಗೆ ತಾವು ಹುಟ್ಟೂರಿಗೆ ಹೋದರೆ ಹೆಚ್ಚೆಚ್ಚು. ಅಪ್ಪ ಇಲ್ಲಿಗೆ ಬಂದರೆ ನಾಲ್ಕು ದಿನ ಉಳಿದುಕೊಂಡರೆ ಹೆಚ್ಚೆಚ್ಚು. ಆ ನಾಲ್ಕು ದಿನ ಹೇಗೋ ನಿಭಾಯಿಸುವುದು ಕಷ್ಟವೇನಲ್ಲ. ಸಣ್ಣಪುಟ್ಟ ವಿಷಯಗಳಿಗೆ ರಾಜಿಯಾದರೂ ದೊಡ್ಡ ವಿಷಯ ಬಂದರೆ ಉಸಿರು ಕಟ್ಟುವಂತಾಗುತ್ತಿತ್ತು ರಾಘವನಿಗೆ. ಉದಾಹರಣೆಗೆ ಅವರ ಹೊಸ ಮನೆಯಲ್ಲಿ ದೇವರಕೋಣೆ ಕಟ್ಟಿಸುವ ವಿಷಯ.

'ನಿಮಗೆ ಬೇಕೇ ಬೇಕೂಂತಾದ್ರೆ ನನ್ನ ಅಡ್ಡಿಲ್ಲ. ಆದರೆ ನನ್ನ ಕೇಳಿದ್ರೆ ಬೇಡ ಅನ್ನೋಳು ನಾನು' ಮುಗುಮ್ಮಾಗಿ ಹೇಳಿದ್ದಳು ರಾಘವನ ಮನೋರಮಾ. ರಾಘವನ ಹೊಸ ಮನೆಯಲ್ಲಿ ದೇವರಕೋಣೆ ಸೇರ್ಪಡೆಯಾಗಲಿಲ್ಲ ಮತ್ತು ಗೃಹಪ್ರವೇಶದ ಹೆಸರಲ್ಲಿ ತೀರಾ ಆತ್ಮೀಯರಾದ ಕೆಲವರನ್ನು ಕರೆದು ಒಂದು ಸಿಹಿಯೂಟ. ಅನಾಥಾಶ್ರಮವೊಂದರಲ್ಲಿ ಆ ದಿನದ ವಿಶೇಷ ಊಟದ ಖರ್ಚನ್ನು ವಹಿಸಿಕೊಂಡಿದ್ದಳು ಮನೋರಮಾ. 'ನಿಮ್ಮ ಶುಭಹಾರೈಕೆ ನಮ್ಮ ಮೇಲಿರಲಿ' ಎಂದು ಕೈ ಮುಗಿದು ವಿನಮ್ರತೆಯಿಂದ ತಲೆಬಾಗಿದ ಹೆಂಡತಿಯನ್ನು ನೋಡಿದಾಗ ರಾಘವನ ಹೃದಯ ತುಂಬಿ ಬಂದಿತ್ತು. ಈ ವ್ಯವಸ್ಥೆಯನ್ನು ಗೃಹಪ್ರವೇಶಕ್ಕೆ ನಿಗದಿಯಾದ ನಾಲ್ಕು ದಿನಗಳ ಹಿಂದೆಯೇ ಮಾಡಿ ಬಂದಿದ್ದರು ದಂಪತಿ, ಯಾರಿಗೂ ಪ್ರಚಾರ ಮಾಡದೆ.

***

'ಗೊತ್ತಾಯ್ತಾ ಸುದ್ದಿ? ಸತ್ಯನ ಮನೇಲಿ ದೊಡ್ಡ ಅನಾಹುತ ಆಯ್ತಲ್ಲೋ, ಏನು ಗ್ರಾಚಾರಾನೋ?' ಫೋನ್ ಮಾಡಿದ್ದ ರಾಘವನ ಗೆಳೆಯ ಆತಂಕದಿಂದ. ಗಾಬರಿಯಿಂದ. ಸತ್ಯ ಇವನಿಗೂ ಆತ್ಮೀಯನೇ. ಕಳೆದ ವಾರವಷ್ಟೇ ಅದ್ದೂರಿಯಾಗಿ ಮಗಳ ಮದುವೆಯ ನಿಶ್ಚಿತಾರ್ಥ ಮಾಡಿ ಮುಗಿಸಿದ್ದ ಸತ್ಯನ ಕುಟುಂಬ ಜವಳಿ ಖರೀದಿಗೆಂದು ತಮಿಳುನಾಡಿಗೆ ಹೊರಟಿದ್ದರಂತೆ. ದಾರಿ ಮಧ್ಯ ಅಪಘಾತ ಆಗಿದೆ. ಅದೂ ಎಂತಾ ಕ್ಷುಲ್ಲಕ ಕಾರಣ. ಅಡ್ಡ ಹಾಯ್ದ ನಾಯಿಯೊಂದನ್ನು ತಪ್ಪಿಸಲು ಹೋಗಿ ಎದುರು ಬರುತ್ತಿದ್ದ ಮತ್ತೊಂದು ವಾಹನಕ್ಕೆ ಗುದ್ದಿ, 'ಜೀವಕ್ಕೆ ಅಪಾಯ ಆಗಿಲ್ಲ ಅನ್ನೋದು ಬಿಟ್ರೆ ಎಲ್ರಿಗೂ ಪೆಟ್ಟು ಬಿದ್ದಿದೆಯಂತೆ. ಪಲ್ಟಿ ಹೊಡೆದು ಅಷ್ಟು ದೂರ ಹಾರಿ ಬಿದ್ದಿತ್ತಂತೆ ಕಾರು. ಮದುವೆಮನೆ ಅಂತ ಉತ್ಸಾಹದಿಂದ ಓಡಾಡ್ಕೊಂಡು ತಯಾರಿ ಮಾಡಬೇಕಾದೋರು ಆಸ್ಪತ್ರೇಲಿ...' ಕೇಳಿಸಿಕೊಳ್ಳುತ್ತಿದ್ದ ರಾಘವ 'ಛೇ..ಛೇ..ಛೇ...' ಎಂದು ಅದೆಷ್ಟು ಬಾರಿ ಲೊಚಗುಟ್ಟಿದ್ದನೋ? ಸಹಾನುಭೂತಿ ತೋರಿಸುವುದಲ್ಲದೆ ಮತ್ತೇನು ಮಾಡುವಂತಿದೆ? ಯಾವ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ದಾಖಲಿಸಲಾಗಿದೆ ಎನ್ನುವ ಪತ್ತೆ ತಿಳಿದುಕೊಂಡು ಅಲ್ಲಿಗೆ ಭೇಟಿ ಕೊಟ್ಟಿದ್ದ ರಾಘವ. ಸತ್ಯ, ಅವನ ಹೆಂಡತಿ, ನಾಳೆ ಮದುಮಗಳಾಗಿ ಹಸೆಮಣೆ ಏರುವ ಕನಸು ಕಾಣುತ್ತಿದ್ದ ಮಗಳು ಎಲ್ಲರೂ ಆಸ್ಪತ್ರೆಯಲ್ಲಿ. ಅದೊಂದು ಹೃದಯವಿದ್ರಾವಕ ನೋಟ. ಎಲ್ಲರಿಗಿಂತ ಹೆಚ್ಚು ರಾಘವನ ಅಂತಃಕರಣ ಮೀಟಿದ್ದು ಮೂಳೆ ಪುಡಿಯಾದ ಬಲಗಾಲಿಗೆ ಪಟ್ಟಿ